## ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ರವರ ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

-

**ಪ್ರಶ್ನೆ**

ಭಾರತ ಸರ್ಕಾರವು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ರಾಜ್ಯದಲ್ಲಿನ ಜನರಿಗೆ ಆಧಾರ ಕಾರ್ಡು ನೀಡುತ್ತಿರುವುದು ಉತ್ತಮವಾದ ಯೋಜನೆಯಾಗಿರುತ್ತದೆ. ಆದರೆ ಸದರಿ ಯೋಜನೆಯ ನ್ಯೂನತೆಗಳು ಸರ್ಕಾರದ ಗಮನಕ್ಕೆ ಬರದಿರುವುದು ದುರದೃಷ್ಟಕರ. ಇದರಿಂದ ಬಡವರಿಗೆ ಆಗುವ ತೊಂದರೆ ಹೇಳತೀರದು. ಕನ್ನಡದಲ್ಲಿ ಮತ್ತು ಆಂಗ್ಲ ಭಾಷೆಯಲ್ಲಿ ಹೆಸರು ಮತ್ತು ವಿಳಾಸವನ್ನು ನಮೂದಿಸಿದಾಗ ಒಂದಕ್ಕೊಂದು ತಾಳೆ ಇರುವುದಿಲ್ಲ. ಇದಕ್ಕೆಲ್ಲಾ ಜವಾಬ್ದಾರರು ಯಾರು?

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಕಸಬಾ ಹೋಬಳಿಯ ಎಸ್. ಕೊಡಗೀಹಳ್ಳಿ ಗ್ರಾಮವಿದ್ದು, ಇದರ ಪಿನ್ ಕೋಡ್ 572213 ಆಗಿರುತ್ತದೆ. ಜನರು ಆಧಾರನಲ್ಲಿ ನಮೂದಿಸುವಾಗ ಎಸ್. ಕೊಡಗೀಹಳ್ಳಿ ಬರುವುದಿಲ್ಲ. ಅದರ ಬದಲಿಗೆ ಸಿ.ಕೊಡಗೀಹಳ್ಳಿ ಎಂದು ಬರುತ್ತದೆ. ಕಸಬಾ ಹೋಬಳಿ ಬದಲಿಗೆ ಚಂದ್ರಶೇಖರ ಪುರ ಹೋಬಳಿ ಬರುತ್ತದೆ. ಇದರಿಂದ ಅಲ್ಲಿನ ಜನರಿಗೆ ಬ್ಯಾಂಕ್ ವ್ಯವಹಾರ ಹಾಗೂ ಇತರೆಗಳಿಗೆ ತುಂಬಾ ತೊಂದರೆಯಾಗಿರುತ್ತದೆ. ಈ ರೀತಿ ಆಗಲು ಕಾರಣಗಳೇನು ಇದರ ಸಂಬಂಧ ಯಾರ ಮೇಲೆ ಕ್ರಮ ಕೈಗೊಳ್ಳಲಾಗಿದೆ? ಎರಡರಿಂದ ಮೂರು ಬಾರಿ ಮಾನ್ಯ ಸದಸ್ಯರುಗಳು ನಿಯಮ 72ರಲ್ಲಿ ಗಮನ ಸೆಳೆದರೂ ಇಲ್ಲಿಯವರೆಗೆ ಉತ್ತರ ಬಂದಿರುವುದಿಲ್ಲ ಸರ್ಕಾರ ಇದರ ಬಗ್ಗೆ ತುರ್ತು ಗಮನ ಹರಿಸಿ ಈ ಸಮಸ್ಯೆಯನ್ನು ಪರಿಹರಿಸಿ ಜನರಿಗೆ ಅನುಕೂಲ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯ ಬಯಸುತ್ತೇನೆ.

-

**ಉತ್ತರ:**

ಭಾರತದ ನಿವಾಸಿಗಳಿಗೆ ವಿಶಿಷ್ಟ ಗುರುತು ಸಂಖ್ಯೆಯನ್ನು ನೀಡುವುದು ಮಹತ್ವಾಕಾಂಕ್ಷಿಯ ಗುರಿಯಾಗಿದ್ದು, ಭಾರತ ಸರ್ಕಾರದ ಭಾರತ ವಿಶಿಷ್ಟ ಗುರುತು ಪ್ರಾಧಿಕಾರವು (ಯುಐಡಿಎಐ) ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಈವರೆಗೆ ಸುಮಾರು 130 ಕೋಟಿ (UIDAI ಒದಗಿಸಿದ ಮೇ 2020ರ ಯೋಜಿತ ಜನ ಸಂಖ್ಯೆ ಪ್ರಕಾರ) ಭಾರತೀಯ ನಿವಾಸಿಗಳಿಗೆ ಆಧಾರ್‌ನು ನೀಡಲಾಗಿದ್ದು, ಭಾರತ ಸರ್ಕಾರವು ಆಧಾರ್ ನೋಂದಾಣಿ ಮತ್ತು ತಿದ್ದುಪಡಿ ಪ್ರಕ್ರಿಯೆಯನು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಎಲ್ಲಾ ರಾಜ್ಯಗಳಲ್ಲಿ ನಿರ್ವಹಿಸುತ್ತಿರುತ್ತಿದೆ. ಕರ್ನಾಟಕ ರಾಜ್ಯದ ನಿವಾಸಿಗಳಿಗೆ ಈವರೆಗೆ ಸುಮಾರು 6.79 ಕೋಟಿ ನಿವಾಸಿಗಳಿಗೆ ಆಧಾರ್ ನ್ನು ವಿತರಿಸಲಾಗಿರುತ್ತದೆ.

ರಾಜ್ಯದಲ್ಲಿ ಆಧಾರ್ ನೋಂದಾಣಿ ಮತ್ತು ತಿದ್ದುಪಡಿ ಕಾರ್ಯಗಳನ್ನು ರಾಜ್ಯ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ), ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಕೇಂದ್ರ ಸರ್ಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಚೆ ಕಛೇರಿ, ಬ್ಯಾಂಕ್, ಬಿ.ಎಸ್.ಎನ್.ಎಲ್ ಕಛೇರಿಗಳು ನಿರ್ವಹಿಸುತ್ತಿರುತ್ತವೆ. ಪ್ರಸ್ತುತ ಆಧಾರ್ ನೋಂದಾಣಿ ಮತ್ತು ತಿದ್ದುಪಡಿಗಳನ್ನು ಭಾರತ ವಿಶಿಷ್ಟ ಗುರುತು ಪ್ರಾಧಿಕಾರದ ವತಿಯಿಂದ ಸೃಜಿಸಿ ನಿರ್ವಹಿಸುತ್ತಿರುವ CELC (Child Enrollment lite client) ಮತ್ತು ECMP (Enrollment Client Multi Platform) ತಂತ್ರಾಂಶಗಳ ಮೂಲಕ ಮಾಡಲಾಗುತ್ತಿದೆ. ಸದರಿ ತಂತ್ರಾಂಶಗಳಲ್ಲಿ ಆಧಾರ್ ನೋಂದಣಿ / ತಿದ್ದುಪಡಿ ಮಾಡುವಾಗ ನಿವಾಸಿಗಳ ವೈಯಕ್ತಿಕ ಮಾಹಿತಿಯನ್ನು ಆಂಗ್ಲ ಭಾಷೆಯಲ್ಲಿ ನಮೂದಿಸಲಾಗುತ್ತಿದ್ದು, ಸದರಿ ಮಾಹಿತಿಯು ಕನ್ನಡಕ್ಕೆ ಸ್ವಯಂಚಾಲಿತವಾಗಿ ಅನುವಾದಗೊಳ್ಳುವುದು. ಆದಾಗ್ಯೂ ತಂತ್ರಾಂಶದಲ್ಲಿ ಅನುವಾದಗೊಂಡ ಕನ್ನಡ ಮಾಹಿತಿಯನ್ನು ತಿದ್ದುಪಡಿ ಮಾಡಲು ಕೂಡ ಅವಕಾಶವಿರುತ್ತದೆ.

ಮುಂದುವರೆದು, CELC ಮತ್ತು ECMP ತಂತ್ರಾಂಶಗಳಲ್ಲಿ ಆಧಾರ್ ನೋಂದಣಿ / ತಿದ್ದುಪಡಿ ಮಾಡುವ ಸಂದರ್ಭದಲ್ಲಿ ಆಧಾರ್ ಆಪರೇಟರ್ ಗಳು ನಮೂದಿಸಲಾದ ನಿವಾಸಿಯ ವೈಯಕ್ತಿಕ ಮಾಹಿತಿಯನ್ನು ಪರಿಶೀಲನೆಗಾಗಿ ನೋಂದಣಿದಾರರಿಗೆ ಪ್ರದರ್ಶಿಸಿ ಖಚಿತಪಡಿಸಿಕೊಂಡ ನಂತರ ಪ್ರಕ್ರಿಯೆ ಮುಂದುವರೆಸಲಾಗುವುದು. ಈ ಹಿನ್ನಲೆಯಲ್ಲಿ ನೋಂದಣಿ / ತಿದ್ದುಪಡಿಯಾದ ಆಧಾರ್ ಕಾರ್ಡ್ ನಲ್ಲಿನ ನಿವಾಸಿಗಳ ಮಾಹಿತಿಯು ಆಂಗ್ಲ ಮತ್ತು ಕನ್ನಡ ಭಾಷೆಗಳ ನಡುವೆ ವ್ಯತ್ಯಾಸವಿರುವುದು ಅವಕಾಶವಿರುವುದಿಲ್ಲ. ಆದಾಗ್ಯೂ ಸದರಿ ಸಮಸ್ಯೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಆಧಾರ್ ರಿಜಿಸ್ಟ್ರಾರ್ ಗಳಿಗೆ ಕಳುಹಿಸಲಾಗಿರುತ್ತದೆ.

ಭಾರತ ವಿಶಿಷ್ಟ ಗುರುತು ಪ್ರಾಧಿಕಾರವು ತಮ್ಮ ದತ್ತಾಂಶದಲ್ಲಿ ಭಾರತ ಅಂಚೆ ಇಲಾಖೆಯು ಕಾಲಕಾಲಕ್ಕೆ ನೀಡುವ ಪಿನ್ ಕೋಡ್ ಗಳ ಮಾಹಿತಿಯನ್ನು ಇಂದೀಕರಿಸಲಾಗಿರುವುದರಿಂದ ರಾಜ್ಯ ಸರ್ಕಾರಕ್ಕೆ ಸದರಿ ದತ್ತಾಂಶದಲ್ಲಿ ಇಂದೀಕರಿಸಲು ಯಾವುದೇ ನಿಯಂತ್ರಣವಿರುವುದಿಲ್ಲ.

ಮುಂದುವರೆದು, ಸದರಿ ವಿಷಯವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಭಾರತ ವಿಶಿಷ್ಟ ಗುರುತು



Generated from eOffice by G JAGADEESHA, CMO-JS(GJ), JOINT SECREATRY, CMO on 13/12/2022 03:23 PM

ಪ್ರಾಧಿಕಾರಕ್ಕೆ ಕೋರಲಾಗಿದ್ದು, ಅದರಂತೆ "ಭಾರತ ವಿಶಿಷ್ಟ ಗುರುತು ಪ್ರಾಧಿಕಾರ (UIDAI) ಯು CELC ಮತ್ತು ECMP ತಂತ್ರಾಂಶಗಳಲ್ಲಿ ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಕಸಬಾ ಹೋಬಳಿಯ ಎಸ್ ಕೋಡಗೀಹಳ್ಳಿ ಗ್ರಾಮದ ಪಿನ್ ಕೋಡ್-572213 ಮತ್ತು ಸಿ ಕೋಡಗೀಹಳ್ಳಿ ಗ್ರಾಮದ ಪಿನ್ ಕೋಡ್ 572213 ಗಳನ್ನು ದತ್ತಾಂಶದಲ್ಲಿ ಇಂದೀಕರಿಸಿರುತ್ತಾರೆ".

ಕಡತ ಸಂಖ್ಯೆ: ಸಿಆಸುಇ 144 ಪಿಆರ್‌ಜೆ 2022

(ಬಸವರಾಜ ಬೊಮ್ಮಾಯಿ )
ಮುಖ್ಯಮಂತ್ರಿ

C-34



Generated from eOffice by G JAGADEESHA, CMO-JS(GJ), JOINT SECREATRY, CMO on 13/12/2022 03:23 PM